ಮೂಲ ದಾವಾ ಸಂಖ್ಯೆ. 84/2017 ಪಿ ಡಬ್ಲ್ಯೂ 5

(ದಿನಾಂಕ 06-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ನನಗೆ ಓದಲು ಬರೆಯಲು ಬರುತ್ತದೆ. ಈ ದಾವೆಯನ್ನು ಚಾಂದ್ ಬೀ ಯವರು ತನ್ನ ಗಂಡನ ಮೇಲೆ ದಾಖಲಿಸಿರುತ್ತಾರೆನ್ನುವ ವಿಚಾರ ಮಾತ್ರ ನನಗೆ ಗೊತ್ತು. ಇನ್ನೂ ಬೇರೆ ಯಾರು ಈ ದಾವೆಯಲ್ಲಿ ಪಕ್ಷಗಾರರಿರುತ್ತಾರೆನ್ನುವುದು ನನಗೆ ಗೊತ್ತಿಲ್ಲ. ಈ ದಾವೆಯನ್ನು ವಾದಿ ಯಾವ ಕಾರಣಕ್ಕಾಗಿ ಹಾಕಿದ್ದಾರೆನ್ನುವುದು ನನಗೆ ಗೊತ್ತಿಲ್ಲ.

ನನ್ನ ತಂದೆ ಜೀವಿತ ಸಮಯದಲ್ಲಿ ನಾನು ಅವರ ಜೊತೆ ವಾಸವಾಗಿದ್ದೆ. ನಮ್ಮ ತಂದೆಯವರು ಜೀವಂತ ಇರುವ ಸಮಯದಲ್ಲಿ ಈ ದಾವೆಯನ್ನು ದಾಖಲಿಸಿದ್ದಾರೆ. ನನ್ನ ತಂದೆಯವರಿಗೆ ಓದಲು ಬರೆಯಲು ಬರುತ್ತಿತ್ತು. ನನ್ನ ತಂದೆಯವರು ಬರವಣಿಗೆಯನ್ನು ಮಾಡುತ್ತಿರಲಿಲ್ಲ. ನನ್ನ ತಂದೆಯವರು ನಿಪಿ-16 ದಾಖಲೆಗೆ ಸಹಿ ಮಾಡಿರುತ್ತಾರೆ ಯಾವ ಕಾರಣಕ್ಕಾಗಿ ಸದರಿ ದಾಖಲೆಗೆ ಸಹಿ ಮಾಡಿರುತ್ತಾರೆನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ನಮ್ಮ ವಕೀಲರಿಗೆ ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ನನ್ನ ತಂದೆಯವರು ಸದರಿ ನಿಪಿ-16 ದಾಖಲೆಗೆ ಯಾವುದೇ ಸಹಿ ಮಾಡಿರುವುದಿಲ್ಲ ವಾದಿ ನನಗೆ ಪರಿಚಯ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯು ಈ ದಾವೆ ಸಲುವಾಗಿ ಒಂದು ಸುಳ್ಳು ದಾಖಲೆ ತಯಾರಿಸಿಕೊಂಡಿದ್ದು ಅದಕ್ಕನುಗುಣವಾಗಲು ವಾದಿಯರು ನನ್ನನ್ನು ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಕರೆತಂದಿರುತ್ತಾರೆ ಅದರಂತೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹಾ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀಮತಿ ಎಸ್ ಹೆಚ್ ವಿ ವಕೀಲರಿಂದಃ-

ನನಗೆ ತಿಳುವಳಿಕೆ ಬಂದಾಗಿನಿಂದ ನನ್ನ ತಂದೆಯವರು ಯಾವ ರೀತಿ ಸಹಿ ಮಾಡುತ್ತಾರೆಂದು ನನಗೆ ಗೊತ್ತು ಎಂದರೆ ಸರಿ. ನಿಪಿ-16 ಇ ಯಂತೆ ನನ್ನ ತಂದೆಯವರು ಎಲ್ಲಾ ದಾಖಲೆಗಳಿಗೆ ಸಹಿ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆಯವರೇ ನಿಪಿ-16 ದಾಖಲೆಗೆ ನಿಪಿ-16 ಇ ಯಂತೆ ಸಹಿ ಮಾಡಿರುತ್ತಾರೆಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ